ಜನಗಳ ಮುಂದೆಯೇ ಹೋಗಿ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಜಿ.ಎಸ್. ಯಡಿಯೂರಪ್ಪ : ಇದೊಂದು ಉದ್ಭವತನದ ಉತ್ತರ. ಇದನ್ನು ಪ್ರತಿಭಟನೆ ಮಾಡಿ, ಈ ಸರ್ಕಾರ ಜನರಿಗೆ ಕೊಟ್ಟಂತಹ ದರ್ಶನವನ್ನು ಈಡೇರಿಸುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ, ಏಂದು ಕಟ್ಟುಕಥೆಯನ್ನು ಇಲ್ಲಿ ಹೇಳಿದ್ದೀರಿ. ನಾಳೆ ಇದನ್ನು ಟೇಪ್‌ಮಾಡಿ ಬಿಟ್ಟು ಎಲ್ಲಾ ಶಾಸಕರಿಗೆ ಚುನಾವಣಾ ಸಭೆಯಲ್ಲಿ ಭಾಷಣ ಮಾಡಲಿಕ್ಕೆ ಹೇಳಿ. ಇದನ್ನು ಪ್ರತಿಭಟನೆ ಮಾಡಿ ನಾವು ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ ಶಾಸಕರು ವಿರೋಧ ಪಕ್ಷದ ನಾಯಕರಾದ ಶ್ರೀ ಜಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮೊದಲು ಬಾರಿಗೆ ದಯಮಾಡಿ ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನೂ ಕೂಡ ಈ ಸದನದಲ್ಲಿ 32-33 ವರ್ಷಗಳ ಕಾಲ ಶಾಸಕನಾಗಿದ್ದೇನೆ. ಅಲ್ಲಿಯಾರೋ ಬೀದಿಯಲ್ಲಿ ಜನ ಮಾತನಾಡಿಕೊಳ್ಳುತ್ತಾರೆ ಏಂದು ಅದನ್ನು ಬಂದು ಇಲ್ಲಿ ಹೇಳುವುದು, ವಿರೋಧಪಕ್ಷದ ನಾಯಕನ ಸ್ಥಾನಕ್ಕೆ, ಘನತೆ ತರುತ್ತದೆಯೇ? ಇಲ್ಲವೇ ಏಂಬ ಬಗ್ಗೆನಾನೇನೂ ಹೇಳುವುದಿಲ್ಲ. I leave it to the judgment of the peopel. ಅದಕ್ಕೂ ನನಗೂ ಸಂಬಂಧ ಇಲ್ಲ. ಈಗ ಮಾನ್ಯ ಬಿಗ್ರೇಯವರು ಒಳ್ಳೆಯ ಪ್ರಶ್ನೆ ಕೇಳಿದರು. You put a relevant question to pin down the Government. I welcome it. I have no objections. It is my duty to answer. ಮೆಡಿಕಲ್ ಸೀಟಿನ ಹಂಚಿಕೆಯಲ್ಲಿ 120 ಕೋಟಿ ರೂಪಾಯಿ ದುಡ್ಡು ಹೊಡೆದಿದ್ದೇವೆ ಏಂದರೆ, ಏನು ಕೋಟಿಗೇನು ಲೆಕ್ಕಾಚಾರ ಬೇಡವೇ? Does it go to bring credit to any politician? ತಾವು ಕುಳಿತು ಅಲ್ಲಿ ನಿರ್ಣಯ ಮಾಡುತ್ತೀರಿ, ವರದು ಸೀಟಿನ ಬಗ್ಗೆ, ಅದು 1992 ರಿಂದ ನಡೆದ ಘಟನೆ ಬಗ್ಗೆನಾನು ಇಲ್ಲಿ ಬಂದು ದೊಡ್ಡನ ಹೇಳಿಕೆಯನ್ನು ಕೊಟ್ಟಾಗ I have read it in the Paper. To help the Medical Education Director, unnecessarily. They want to make her scape-goat. but I have not answered all these points. I do not want to create bitter atmosphere unnecessarily and she is one of the best officers. I do not want to say beyond this. Sittting in the place, because the Hon. Leader of Opposition has got certain constitutional responsibilities. ಅಲ್ಲಿ ಬೀದಿಯಲ್ಲಿ ಜನ ಮಾತನಾಡಿಕೊಂಡರೆ, ಅದನ್ನು ಬಂದು ನನಗೆ ಹೇಳುವುದು ಏಂದರೆ, we will leave it to the judgement of the people of the State. ಸರ್ಕಾರ ಭ್ರಷ್ಟಾಚಾರ ನಡೆಸಿದೆ ಏಂದು ವಿರೋಧಪಕ್ಷಗಳಿಗಿಂತ ಮೊದಲು ನೀವು ಕರಪತ್ರಗಳನ್ನು ಮುದ್ರಿಸಿ ಊರು ಊರಿಗೆ ಹಂಚಿದ್ದೀರಿ ಹಂಚಿದ್ದುದು. 1990ರ ಚುನಾವಣೆಯಲ್ಲಿ ಜಿ.ಜೆ.ಪಿ.ಯವರು ಶೇಕಡ 27ರಷ್ಟು ಮತಗಳನ್ನು ಗಳಿಸಿದರು. ಈಗ ಶೇಕಡ 7ಕ್ಕೆ ಇಳಿದಿ ಪಾರ್ಲಿಮೆಂಟಿನ ವಿಲೆಕ್ಷನಿನಲ್ಲಿ ಶೇಕಡ 29ರಷ್ಟು ಮತಗಳನ್ನು ಗಳಿಸಿದರು. ಈಗ ಶೇಕಡ 7ಕ್ಕೆ ಇಳಿದಿದ್ದಾರೆ. ಮುಂಬರುವ ಪಾರ್ಲಿಮೆಂಟಿನ ವಿಲೆಕ್ಷನಿನಲ್ಲಿ ಎಷ್ಟು ಮತ